



ಅರುಣ ಪಿ. ಭಟ್ಟ

## ವಾರಭವಿಷ್ಯ: 12.8.2021ರಿಂದ 18.8.2021ರವರೆಗೆ




ಅನೀರಿಕ್ಷಿತ ವಿವಾಹ ಪ್ರಸ್ತಾವ ಬರುವುದು. ಮನೆಯಲ್ಲಿನ ಆರ್ಥಿಕ ಸಂಕಷ್ಟ ಬಗೆಹರಿಯುವುದು. ಕಲಾವಿದರಿಗೆ ಉತ್ತಮ ಲಾಭ ಆಗಲಿದೆ. ನೌಕರಿಯಲ್ಲಿ ಪ್ರಮೋಷನ್ ಸಿಗುವ ಯೋಗವಿದೆ. ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣ ಭಾಗ್ಯ. ಆದರೆ ಕೌಟುಂಬಿಕ ಜವಾಬ್ದಾರಿಯಲ್ಲಿ ಹಿನ್ನಡೆ. ಮೂತ್ರ ಜನಕಾಂಗ ಪೀಡೆ. ಶುಭದಿನ 18. ಶ್ರೀಕೃಷ್ಣ ಪೂಜೆ ಉಪವಾಸ ಮಾಡಿರಿ. ತುಲಸಿ ಅರ್ಚನೆ ಮಾಡಿರಿ.




ಪ್ರಾರಂಭದ ಎರಡು ದಿನಗಳಲ್ಲಿ ಬಂಧುಗಳಿಂದ ಸುವಾರ್ತೆ ನಿಮಗೆ ಸಿಗಲಿದೆ. ಗೃಹ ನಿರ್ಮಾಣ ಕೆಲಸಗಳಲ್ಲಿ ಅನೀರಿಕ್ಷಿತ ಪ್ರಗತಿ ಆಗಲಿದೆ. ನಿರುದ್ಯೋಗಿಗಳಿಗೆ ಸರಕಾರಿ ಉದ್ಯೋಗ ಸಿಗುವ ಭಾಗ್ಯ ಇದೆ. ಮನೆಗೆ ನೆಂಟರಿಷ್ಟರ ಆಗಮನ. ಧನಲಾಭ ಪ್ರಾಪ್ತವಾಗಲಿದೆ. ವಾಹನ ಚಲಾಯಿಸುವಾಗ ಎಚ್ಚರಿಕೆಯಿರಲಿ. ಶುಭದಿನ 16. ಕಾಲ ಭೈರವಾಷ್ಟಕ ಪಠಣ ಮಾಡಿರಿ.




ಬಹು ದಿನಗಳ ಗೃಹ ಕಲಹಕ್ಕೆ ಮುಕ್ತಿ ದೊರೆಯುವುದು. ಸ್ಪರ್ಧಾತ್ಮಕ ಪರೀಕ್ಷೆ ಅಭ್ಯರ್ಥಿಗಳಿಗೆ ಉತ್ತಮ ಯಶ. ಸರಕಾರಿ ನೌಕರದಾರರಿಗೆ ಪದೋನ್ನತಿ ಯಶ ಇಚ್ಚಿತ ಸ್ಥಳಕ್ಕೆ ಬದಲಾವಣೆ. ವಾರಾಂತ್ಯದಲ್ಲಿ ಆಪ್ತರಿಂದ ಸನ್ಮಾನ. ಅನೀರಿಕ್ಷಿತ ಚಿಕ್ಕ ಪ್ರವಾಸ. ಸರ್ಕಾರಿ ಕಛೇರಿ ಕಾಗದ ಪತ್ರಗಳ ಕೆಲಸ ಸರಾಗ ಮುಗಿಯುವುದು. ಶುಭದಿನ 16. ನವನಾಗ ನಾಮ ಸ್ತೋತ್ರ ಮಾಡಿರಿ.




ಸ್ವತಂತ್ರ ಉದ್ಯೋಗಸ್ಥರಿಗೆ ನಿರೀಕ್ಷೆಗಿಂತ ಲಾಭ. ವಿದ್ಯುತ್ ಕಾಮಗಾರರಿಗೆ ಜನರಿಂದ ಪ್ರಶಂಸೆ. ಪರ ಊರಿನ ಪ್ರವಾಸದಲ್ಲಿ ಜ್ವರ ಪೀಡೆ ಕಾಣಿಸಿತು ಎಚ್ಚರವಹಿಸಿ. ಮಕ್ಕಳು ಮುನಿಸಿಕೊಂಡಾರು ಎಚ್ಚರ ತೆಗೆದುಕೊಳ್ಳಿ. ಶತ್ರುಗಳ ಕಾಟ ನಡೆಯೋದಿಲ್ಲ. ಮನೆಗೆ ಅಪರೂಪದ ಅತಿಥಿಗಳ ಆಗಮನ. ಆರೋಗ್ಯ ಭಾಗ್ಯದಿಂದ ಸಂತೋಷ. ಶುಭದಿನ 14. ದತ್ತಾತ್ರೇಯ ಸ್ತುತಿ ಮಾಡಿರಿ.




ನೆನೆಗುದಿಗೆ ಬಿದ್ದ ಕೆಲಸಗಳು ಕೊನೆಯ ಹಂತ ತಲುಪುವುವು. ಹೊಸ ನಿವೇಶನ ಖರೀದಿಗೆ ಸಕಾಲ. ಆದರೆ, ಮನೆ ಬದಲಾಯಿಸಿದರೆ ತೊಂದರೆ ಇಲ್ಲ. ನಿರೀಕ್ಷಿತವಾದ ಜನರಿಂದ ಮಾನ ಸನ್ಮಾನದ ಭಾಗ್ಯವಿದೆ. ಸಂಕಟದ ಮಧ್ಯೆ ಮಿಂಚುವಿರಿ. ಹೊಸವಸ್ತು ಖರೀದಿ ಪ್ರಕ್ರಿಯೆ ನಡೆಯಲಿದೆ. ಉದರ ದೋಷ ಕಾಡಬಹುದು. ಶುಭದಿನ 13. ಶನಿ ಸ್ತೋತ್ರ ಮಾಡಿರಿ.




ಉತ್ತಮವಾದ ವ್ಯವಸ್ಥೆಯಲ್ಲಿ ಇದ್ದಂತೆ ಅನ್ನಿಸಿದರೂ ಒಂದೊಂದಾಗಿ ಕರಗುವುವು. ಸೇವಕರು ತಳ ಕೀಳುವರು. ಹೆಂಡತಿಗೆ ತವರುಮನೆ ವಾಸ. ಅವಿವಾಹಿತರಿಗೆ ವಿವಾಹ ಪ್ರಸ್ತಾಪಕ್ಕೆ ಅನುಕೂಲ. ಮೋಜಿಗಾಗಿ ಖರ್ಚು. ಮೈ ಕೈ ಕಾಲು ನೋವು. ಆಸ್ಪತ್ರೆ ವಾಸ. ವಾರದ ಕೊನೆಯಲ್ಲಿ ಸಮಸ್ಯೆಗಳು ಬಗೆಹರಿದು ಸಂತಸದ ವಾತಾವರಣ. ಶುಭದಿನ 15. ಈಶ್ವರನಿಗೆ ತಿಲಾರ್ಚನೆ ಮಾಡಿರಿ.




ಸರ್ವ ಪ್ರಕಾರದಿಂದ ಉತ್ತಮವಾದ ವಾರ ದೇವಾಲಯ ಪ್ರಮುಖರಿಗೆ ಸರಕಾರಿ ಅನುದಾನ ಸಿಗುತ್ತದೆ. ಗಂಡ ಯಾ ಹೆಂಡತಿಗೆ ಉತ್ಕರ್ಷ, ಸಾಮಾಜಿಕ ಮನ್ನಣೆ ಸಿಗಲಿದೆ. ಪರದೇಶ ಪ್ರವಾಸ ಯೋಗವಿದೆ. ವ್ಯಕ್ತಿತ್ವದ ಛಾಪು ಒತ್ತುವಿರಿ. ಹೊಸ ಮಿತ್ರರಿಂದ ಲಾಭ. ವಾರದ ಕೊನೆಯ ದಿನ ನಷ್ಟ ಸಂಭವಿಸಬಹುದು. ಶುಭದಿನ 15. ಶಿವಾನಂದ ಲಹರಿ ಪಠಿಸಿರಿ.




ಸಾಡೇಸಾತಿ ಐದು ತಿಂಗಳಿದೆ. ಸ್ಥಿರ ನೌಕರಿ ಪ್ರಾಪ್ತಿ. ಸತತ ಪ್ರವಾಸದಿಂದ ಕಿರಿಕಿರಿ ಅನಿಸುತ್ತದೆ. ಉನ್ನತ ಅಧಿಕಾರ ಪ್ರಾಪ್ತವಾಗುವ ಭಾಗ್ಯವಿದೆ. ರಾಜಕಾರಣಿಗಳಿಗೆ ಅತ್ಯಂತ ಶುಭ. ಬಹುದಿನದ ಪರಿಶ್ರಮಕ್ಕೆ ಪ್ರತಿಫಲ. ನವ ಜೀವನದಲ್ಲಿ ಕಾಲಿಡುವ ತರುಣರಿಗೆ ಶುಭೋದಯ. ವಾರಾಂತ್ಯದಲ್ಲಿ ನೌಕರಿದಾರರಿಗೆ ಯಶಸ್ಸು. ಶುಭದಿನ 12. ಸುದರ್ಶನ ಜಪ ಮಾಡಿರಿ.




ವಿದೇಶ ಗಮನದ ಯತ್ನ ಯಶ ಕೊಡುವುದು. ಹಣ ಖರ್ಚಾದರೂ ಸಾಮಾಜಿಕ ಮನ್ನಣೆ ಲಭಿಸುವುದು. ಬಹು ದಿನಗಳ ನಂತರ ಮಕ್ಕಳ ವಿಷಯದಲ್ಲಿ ಸುವಾರ್ತೆ ಕೇಳುವಿರಿ. ಉತ್ಸವ ಪ್ರದರ್ಶನಗಳಲ್ಲಿ ಭಾಗವಹಿಸುವಿರಿ. ದೇವತಾ ಪೂಜೆ– ಪುನಸ್ಕಾರಗಳಲ್ಲಿ ಭಾಗವಹಿಸುವಿರಿ. ಆರೋಗ್ಯದಲ್ಲಿ ಸುಧಾರಣೆ ಕಾಣಿಸಿಕೊಳ್ಳಲಿದೆ. ಶುಭದಿನ 15. ಕುಲದೇವತಾ ಪ್ರಾರ್ಥನೆ ಮಾಡಿರಿ.




ಏಕಾದಶ ಗುರುವಿನ ಅನುಗ್ರಹ ಒಂದು ಬಿಟ್ಟರೆ ಉಳಿದ ಆಕಾಶ ಕಾಯಗಳೆಲ್ಲ ಪ್ರತಿಕೂಲವಾಗಿರುವುವು. ಬಂಧಗಳು ಶತ್ರುಗಳೊಡನೆ ಸೇರುವರು. ಅಷ್ಟಮದ ರವಿಕುಜರಿಂದ ಅಗ್ನಿ ಭಯವಿದೆ. ಮೂಲವ್ಯಾದಿ ಕಾಣಿಸಲಿದೆ. ಅಧಿಕಾರಿಗಳಿಗೆ ಅಧಿಕಾರ ಚ್ಯುತಿಯ ಸಂದರ್ಭ ಎದುರಾಗಲಿದೆ. ಎಚ್ಚರದಿಂದ ವ್ಯವಹರಿಸಿ. ಶುಭದಿನ 16. ನವಗ್ರಹ ಪೂಜೆ ಮಾಡಿರಿ.




ಹೊಸಮನೆಯ ಪ್ರವೇಶಕ್ಕೆ ಸಿದ್ಧತೆಯಾಗುವುದು. ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ. ಕೆಲಸದಲ್ಲಿ ಪದೋನ್ನತಿಯಾಗುವುದು. ಇಚ್ಛಿತ ಸ್ಥಳಕ್ಕೆ ವರ್ಗಾವಣೆ ಆಗುವುದು. ಆರ್ಥಿಕವಾಗಿ ನಿರೀಕ್ಷಿತ ಲಾಭ. ಕ್ರಯ ವಿಕ್ರಯಕ್ಕೆ ಸಕಾಲ. ಮಕ್ಕಳ ಭಾಗ್ಯೋದಯ ಸಂದರ್ಭದಲ್ಲಿ ಯಾರದಾದರೂ ಮದುವೆಯ ಪ್ರಯತ್ನದಲ್ಲಿ ಯಶಸ್ಸು. ಮಹತ್ವದ ಕೆಲಸದಲ್ಲಿ ಮುನ್ನಡೆ. ಶುಭದಿನ 16. ಶಂಕರಾಚಾರ್ಯರ ಸೌಂದರ್ಯ ಲಹರಿ ಪಠಿಸಿರಿ.




ನವ ವಿವಾಹಿತರಿಗೆ ಸಂತತಿ ಪ್ರಾಪ್ತಿ ಯಾ ಪ್ರಾಪ್ತಿಯ ಲಕ್ಷಣ. ಅನೇಕ ದಿನಗಳ ನಿರುದ್ಯೋಗ ಸಮಸ್ಯೆ ಬಗೆ ಹರಿಯುವುದು. ಹೊಟ್ಟೆ ಕಿಚ್ಚಿನ ಜನರಿಂದ ಪರೋಕ್ಷ ತೊಂದರೆ ಉಂಟಾಗುತ್ತದೆ. ಎಲ್ಲ ಕೆಲಸಗಳಿಂದ ಧನಲಾಭ. ಷೇರು ವ್ಯವಹಾರದಾರರಿಗೆ ಬಂಡವಾಳದ ಹಿಡಿತವಿರಲಿ. ನಿಮ್ಮ ಮನೆ ದೇವರ ದರ್ಶನ ಮಾಡುವ ಯೋಚನೆ ಮಾಡಲಿದ್ದಿರಿ. ಶುಭದಿನ 14. ಗಣಪತಿಗೆ ದೂರ್ವಾರ್ಚನೆ ಮಾಡಿರಿ.